# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 806/2024**

ಆರೋಪಿಯ ಹೆಸರುಃ ಶ್ರೀಮತಿ ಸವಿತಾ ಅಶೋಕ ತಾಂಡೇಲ

ವಯಸ್ಸುಃ 39

ಉದ್ಯೋಗ ಮೀನುಗಾರಿಕೆ

ವಿಳಾಸಃ ಸಾಃ ಗಣಪತಿ ದೇವಸ್ಥಾನದ ಹತ್ತಿರ, ವಿದ್ಯಾನಗರ ಮಂಜಗುಣಿ, ತಾಃ ಅಂಕೋಲಾ

## ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿತಳ ಹೇಳಿಕೆ

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?

ಉತ್ತರಃ

ಪ್ರ 2: ಫಿರ್ಯಾದಿ ಅಂಕೋಲಾ ತಾಲೂಕಾ ಕೃಷಿ ಹುಟುವಳಿ ಮಾರಾಟ ಸಹಕಾರಿ ಸಂಘ ನಿಯಮಿತ ಶಾಃ ಅಂಕೋಲಾ ಇದರ ಮುಖ್ಯ ಕಾರ್ಯನಿರ್ವಾಹಕ ಪಿಡಬ್ಲ್ಯೂ 1 : ಶ್ರೀ ಅಶೋಕ ಗಣಪತಿ ನಾಯಕ, ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕಃ 03-05-2021 ರಂದು ಆರೋಪಿ ಫಿರ್ಯಾದಿದಾರರ ಸೊಸೈಟಿಯಿಂದ ರೂ. 1,00,000/- ಸಾಲವನ್ನು ಮೀನುಗಾರಿಕಾ ವ್ಯವಹಾರದ ಸಲುವಾಗಿ ಪಡೆದಿದ್ದು ಇರುತ್ತದೆ. ಆರೋಪಿತಳು ವ, ಜಾಮಿಡಾನುದಾರರು ಒಪ್ಪಿ ಎಲ್ಲಾ ಸಾಲ ಪತ್ರಗಳಿಗೆ ಮತ್ತು ಕರಾರಿಗೆ ಮತ್ತು ಜಾಮೀನು ಪತ್ರಕ್ಕೆ ಸಹಿ ಮಾಡಿಕೊಟ್ಟಿದ್ದು, ಸದರಿ ಸಾಲದ ಕರಾರುಗಳ ಪ್ರಕಾರ ಆರೋಪಿತಳು ವ, ಜಾಮಿಡಾನುದಾರರು ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ.1,26,340/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತಳು ದಿನಾಂಕಃ 04-09-2024

ರಂದು ತಾನು ಬ್ಯಾಂಕ್ ಆಫ್ ಬರೋಡಾ, ಶಾಖೆಃ ಅಚವೆ, ಚನ್ನಗಾರ, ತಾಃ ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 000011 ನ್ನು ರೂ. 1,26,340/- ಕ್ಕೆ ನೀಡಿರುತ್ತಾಳೆ. ಸದರಿ ಆರೋಪಿತಳು ನೀಡಿದ ಚೆಕ್ಕು ಖಾತೆಯಲ್ಲಿ " **Funds Insufficient**" ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿಳಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3: ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4: ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀಯಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀಯಾ?

ಉತ್ತರಃ

( ಆರೋಪಿತಳಿಗೆ ಮೇಲಿನ ಪ್ರಶ್ನೆಗಳನ್ನು ಆಕೆಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 12-08-2025. **( ಅರ್ಪಿತಾ ಬಿ. ಬೆಲ್ಲದ)**

**ಪ್ರ ದ ನ್ಯಾದಂ, ಅಂಕೋಲಾ.**